ಕರ್ನಾಟಕ ಸರ್ಕಾರ

**ಅತೀ ಜರೂರು**

ಸಂಖ್ಯೆ: ಡಿಟಿಇ 06 ಬಿಎಲ್‌ಡಿ 2010
ಅಡಕ: ನಮೂನೆ

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:19-04-2013

**ಇವರಿಗೆ,**

ಪ್ರಿನ್ಸಿಪಾಲರು,

1. ಸರ್ಕಾರಿ ಪಾಲಿಟೆಕ್ನಿಕ್, / ತುಮಕೂರು / ಕಾರವಾರ / ಗುಲ್ಬರ್ಗಾ / ಬಿಜಾಪುರ / ಮಿರ್ಲೆ / ಇಮ್ಮಡಿಹಳ್ಳಿ / ಹೊಳೆನರಸೀಪುರ / ಹರಿಹರ / ಹಿರಿಯೂರು / ತುರುವೇಕೆರೆ / ಝಳಕಿ / ದೇವದುರ್ಗ / ಜೋಯಿಡಾ / ಸಿದ್ದಾಪುರ / ಮುಂಡುಗೋಡು / ಮುಧೋಳ್ / ರಬಕವಿ ಬನಹಟ್ಟಿ / ಬಾಗಲಕೋಟೆ.
2. ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರಘಟ್ಟ, ಬೆಂಗಳೂರು.
3. ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ / ರಾಯಚೂರು.
4. ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಬಳ್ಳಾರಿ.

ಮಾನ್ಯರೆ,

ವಿಷಯ: Review of encroachment of land belonging to Education Department.

ಉಲ್ಲೇಖ: ಈ ಕಛೇರಿ ಪತ್ರ ಸಂಖ್ಯೆ: ಡಿಟಿಇ 06 ಬಿಎಲ್‌ಡಿ 2010 ದಿನಾಂಕ: 26-04-2010, 18-11-2010 ಮತ್ತು 03-01-2011.

----------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಸಂಸ್ಥೆಗಳಲ್ಲಿ ಭೂಮಿ ಮತ್ತು ಕಟ್ಟಡಗಳ ರಿಜಿಸ್ಟಾರ್ ನಿರ್ವಹಿಸಲಾಗಿದೆಯೇ, ಸಂಸ್ಥೆಗೆ ಎಷ್ಟು ಎಕರೆ ಭೂಮಿಯನ್ನು ಒದಗಿಸಲಾಗಿದೆ ಹಾಗೂ ಇದರಲ್ಲಿ ಒತ್ತುವಾರಿಯಾಗಿದೆಯೇ, ಒತ್ತುವಾರಿಯಾಗಿದ್ದಲ್ಲಿ ತೆಗೆದುಕೊಂಡ ಕ್ರಮ ಹಾಗೂ ಇನ್ನಿತರೆ ಮಾಹಿತಿಗಳನ್ನು ದಾಖಲೆಗಳೊಂದಿಗೆ ತಪ್ಪದೇ ಈ ಕಛೇರಿಗೆ ಕಳುಹಿಸಬೇಕೆಂದು ಉಲ್ಲೇಖದ ಈ ಕಛೇರಿಯ ಪತ್ರಗಳಲ್ಲಿ ಕೋರಲಾಗಿತ್ತು. ಅದರೆ, ತಮ್ಮ ಸಂಸ್ಥೆಯಿಂದ ಇದುವರೆವಿಗೂ ಯಾವುದೇ ಮಾಹಿತಿಗಳು ಬಂದಿರುವುದಿಲ್ಲ. ನಮೂನೆಯ ಕಾಲಂ ಸಂಖ್ಯೆ (7) ರಲ್ಲಿ ಮೂಲವಾಗಿ ಸಂಸ್ಥೆಗೆ ಹಂಚಿಕೆಯಾದ ಒಟ್ಟು ಜಮೀನಿನ ವಿವರಗಳನ್ನು ತಪ್ಪದೇ ನಮೂದಿಸಬೇಕೆಂದು ಸೂಚಿಸಲಾಗಿದೆ. ಈ ವಿಷಯದ ಬಗ್ಗೆ ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆಗೆ ಮಾಹಿತಿ ನೀಡಬೇಕಾಗಿರುವುದುರಿಂದ ಈ ಪತ್ರ ತಲುಪಿದ ಕೂಡಲೇ ತಪ್ಪದೇ ಮಾಹಿತಿಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿಮಾಡಿ ದಿನಾಂಕ:30-04-2013 ರೊಳಗೆ ಈ ಕಛೇರಿಗೆ ಕಳುಹಿಸಬೇಕೆಂದು ಕೋರಲಾಗಿದೆ. ಇದನ್ನು ಅತೀ ಜರೂರು ಎಂದು ಪರಿಗಣಿಸಲು ಸಹ ಸೂಚಿಸಲಾಗಿದೆ.

1) ಸಂಸ್ಥೆಯಲ್ಲಿ ಸಂಸ್ಥೆಗೆ ಸಂಬಂಧಿಸಿದ ಭೂಮಿ ಮತ್ತು ಕಟ್ಟಡಗಳ ರಿಜಿಸ್ಟಾರ್ ನಿರ್ವಹಿಸಲಾಗಿದೆಯೇ? (ಪ್ರತಿಯನ್ನು ಲಗತ್ತಿಸುವುದು).

2) ಸಂಸ್ಥೆಗೆ ಮಂಜೂರಾಗಿರುವ ಜಮೀನಿನ ವಿವರ (ಎಕರೆಗಳಲ್ಲಿ) ಹಾಗೂ ಈ ಜಮೀನು ಸಂಸ್ಥೆಯ ಪ್ರಿನ್ಸಿಪಾಲರ ಹೆಸರಿನಲ್ಲಿದೆಯೇ? ಒಂದು ವೇಳೆ ಜಮೀನನ್ನು ದಾನಿಗಳು ದಾನ ಮಾಡಿದಲ್ಲಿ ಇದು ಸಂಸ್ಥೆಯ ಪ್ರಿನ್ಸಿಪಾಲರ ಹೆಸರಿನಲ್ಲಿದೆಯೇ? ಇದಕ್ಕೆ ಸಂಬಂಧಿಸಿದ ದಾನ ಪತ್ರ/ಆದೇಶಗಳ ಪ್ರತಿಗಳನ್ನು ಲಗತ್ತಿಸುವುದು. ಸಂಸ್ಥೆಗೆ ಮಂಜೂರಾಗಿರುವ ಜಮೀನು ಗೋಮಾಳ/ಕಚ್ಚಾ/ಅರಣ್ಯ/ಕರಬಾ/ಬಕಾರ ಹೋಕಂ ಯಾವುದು ಎಂದು ನಮೂದಿಸುವುದು. (ಆರ್.ಟಿ.ಸಿ., ಸೈಟ್ ಪ್ಲಾನ್, ವಿಲೇಜ್ ಮ್ಯಾಪ್, ಖಾಸರ ಪ್ಲಾನ್ ಮತ್ತು Land Use Certificate ಪ್ರತಿಗಳನ್ನು ಲಗತ್ತಿಸುವುದು)

3) ಸಂಸ್ಥೆಗೆ ಮಂಜೂರಾಗಿರುವ ಜಮೀನಿನಲ್ಲಿ ಒತ್ತುವಾರಿಯಾಗಿದೆಯೇ? ಒತ್ತುವಾರಿಯಾಗಿದ್ದಲ್ಲಿ ಎಷ್ಟು ಎಕರೆ ಒತ್ತುವಾರಿಯಾಗಿದೆ, ಒತ್ತುವಾರಿದಾರರ ಹೆಸರು, ವಿಳಾಸ ಮತ್ತು ಒತ್ತುವಾರಿಯನ್ನು ತೆರವುಗೊಳಿಸಲು ತೆಗೆದುಕೊಂಡ ಕ್ರಮ ಹಾಗೂ ಈಗ ಅದು ಯಾವ ಹಂತದಲ್ಲಿದೆ. ಒತ್ತುವಾರಿಯಾಗಿರುವ ಜಮೀನಿನಲ್ಲಿ ಯಾವ ಕಾರ್ಯಚಟುವಟಿಕೆಗಳು ನಡೆಯುತ್ತಿದೆ.

4) ಮೇಲಿನ ಮಾಹಿತಿಯೊಂದಿಗೆ ಪತ್ರಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ಕೋರಿರುವ ಮಾಹಿತಿಯನ್ನು ಸಹ ಭರ್ತಿ ಮಾಡಿ ಕಳುಹಿಸತಕ್ಕದ್ದು.

ತಮ್ಮ ವಿಶ್ವಾಸಿ,

(signature) 2/5/13

ಸಹ ನಿರ್ದೇಶಕರು(ಆಡಳಿತ).

[redacted]ರ್ದೇಶಕರು (ಆಡಳಿತ)

[redacted], ಬೆಂಗಳೂರು.

(signature) 18/4/13

ಪ್ರತಿ ಇವರಿಗೆ,

ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ಮಾಹಿತಿಗಾಗಿ.

# ಸರ್ಕಾರಿ ಜಮೀನಿನ ಅತಿಕ್ರಮಣದ ಬಗ್ಗೆ ಮಾಹಿತಿ

ಸಂಸ್ಥೆಯ ಹೆಸರು: ಜಿಲ್ಲೆ:

ರೂ. ಲಕ್ಷಗಳಲ್ಲಿ

| ಕ್ರ. ಸಂ. | ಜಿಲ್ಲೆ | ವಾರ್ಡ್/ ಗ್ರಾಮದ ಹೆಸರು | ಸಂಸ್ಥೆಯ ಹೆಸರು | ಸಂಸ್ಥೆಯ ಜಮೀನು ಅಥವಾ ಕಟ್ಟಡ ಒತ್ತುವರಿ ಆಗಿದೆಯೇ | ಒತ್ತುವರಿ ಆಗಿದ್ದರೆ ಕಾಲಂ 6 ರಿಂದ 12ರ ವರೆಗಿನ ಮಾಹಿತಿ ನೀಡುವುದು | ಸರ್ವೇ ನಂ./ಸಿಟಿ ಸರ್ವೇ ನಂ. | ಮೂಲವಾಗಿ ಹಂಚಿಕೆಯಾದ ಒಟ್ಟು ಜಮೀನು ಎಷ್ಟು?(ಎಕರೆ/ಗುಂಟೆ/ಚ.ಅಡಿ) | ಒತ್ತುವರಿ ಆಗಿರುವ ಪ್ರದೇಶ (ಎಕರೆ/ಗುಂಟೆ/ಚ.ಅಡಿ) | ಒತ್ತುವರಿ ಮಾಡಿರುವವರ ಹೆಸರು | ಒತ್ತುವರಿ ಮಾಡಿರುವವರ ವಿಳಾಸ | ಒತ್ತುವರಿ ಮಾಡಿರುವ ಜಾಗದ ಅಂದಾಜು ಮೌಲ್ಯ | ಒತ್ತುವರಿ ತೆರವುಗೊಳಿಸಲು ಕೈಗೊಂಡ ಕ್ರಮ | ಷರಾ |
|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 5ಅ | 6 | 7 | 8 | 9 | 10 | 11 | 12 | 13 |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |